ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 408
2) ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ: : 04-02-2021
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಲಾಕ್‌ಡೌನ್‌ನಿಂದ ರಾಜ್ಯದಲ್ಲಿ ಜಿ.ಎಸ್.ಟಿ. ನಿವ್ವಳ ಸಂಗ್ರಹಣೆಯಲ್ಲಿ ಖೋತಾ ಆಗಿರುವುದು ನಿಜವೇ (ಪೂರ್ಣ ಮಾಹಿತಿ ನೀಡುವುದು);	ಹೌದು. 2019-20ರ ಆರ್ಥಿಕ ವರ್ಷಕ್ಕೆ (ಡಿಸೆಂಬರ್ ಅಂತ್ಯದವರೆಗೆ) ರಾಜ್ಯದ ನಿವ್ವಳ ಜಿ.ಎಸ್.ಟಿ. ಸಂಗ್ರಹವು ರೂ.29920.00 ಕೋಟಿಗಳಾಗಿತ್ತು. 2020-21ರ ಇದೇ ಅವಧಿಗೆ ರಾಜ್ಯದ ನಿವ್ವಳ ಜಿ.ಎಸ್.ಟಿ. ಸಂಗ್ರಹಣೆಯು ರೂ.26854.00 ಕೋಟಿಗಳಾಗಿರುತ್ತದೆ. ನಿವ್ವಳ ಖೋತಾವು ರೂ.3066.00 ಕೋಟಿ ಆಗಿರುತ್ತದೆ.
ಆ)	ಈ ತೆರಿಗೆ ಸಂಗ್ರಹಣೆ ಖೋತಾವನ್ನು ನೀಗಿಸಲು ಕೇಂದ್ರ ಸರ್ಕಾರ ಸೂಚಿಸಿರುವ ಮಾರ್ಗೋಪಾಯಗಳೇನು; (ವಿವರಗಳನ್ನು ಒದಗಿಸುವುದು)	ರಾಜ್ಯಗಳು ಸಂಪೂರ್ಣ ನಷ್ಟ ಪರಿಹಾರವನ್ನು ಪಡೆಯಲು ಅರ್ಹತೆಯನ್ನು ಹೊಂದಿರುತ್ತವೆ. ಕೇಂದ್ರ ಸರ್ಕಾರದಿಂದ 2020-21 ನೇ ಸಾಲಿನಲ್ಲಿ (ನವಂಬರ್-2020 ಅಂತ್ಯದವರೆಗೆ) ಬರಬೇಕಾಗಿರುವ ನಷ್ಟ ಪರಿಹಾರದ ಮೊತ್ತವು ರೂ.23057 ಕೋಟಿಯಷ್ಟಿದ್ದು, ಇದರಲ್ಲಿ ರೂ.3553.00 ಕೋಟಿ ನಷ್ಟ ಪರಿಹಾರ ಹಾಗೂ ರೂ.9721.00 ಕೋಟಿ ನಷ್ಟ ಪರಿಹಾರ ಸಾಲವು ಸೇರಿ ಒಟ್ಟಾರೆ ರೂ.13274.00 ಕೋಟಿ ಬಂದಿರುತ್ತದೆ. ನವೆಂಬರ್-2020 ಅಂತ್ಯಕ್ಕೆ ರೂ.9783.00 ಕೋಟಿ ಬಾಕಿ ಇನ್ನೂ ಬರಬೇಕಾಗಿರುತ್ತದೆ. ಜಿ.ಎಸ್.ಟಿ. ತೆರಿಗೆ ಪದ್ಧತಿ ಜಾರಿಗೆ ಬಂದಾಗಿನಿಂದ, ರಾಜ್ಯಗಳಿಗೆ ಉಂಟಾಗುತ್ತಿರುವ ಕೊರತೆಯನ್ನು (2015-16ರ ಪ್ರಕಾರ ರಾಜ್ಯಗಳ ತೆರಿಗೆ ಸಂಗ್ರಹಣೆ ಮೊತ್ತಕ್ಕೆ ನಿಗದಿಪಡಿಸಿದ ದರದಂತೆ ಏರಿಕೆ) ಕೇಂದ್ರ ಸರ್ಕಾರವು ಸೆಸ್ ಕಾಯ್ದೆ 2017ರ ಮುಖಾಂತರ ಸಂಗ್ರಹಿಸುತ್ತಿರುವ ಸೆಸ್ ನಿಂದ ಪ್ರತಿ ವರ್ಷವು ತುಂಬಿಕೊಡುತ್ತಿದೆ. 2020-21 ನೇ ಸಾಲಿನಲ್ಲಿ ಕೋವಿಡ್ ಸಾಂಕ್ರಾಮಿಕದಿಂದ ಉಂಟಾಗಿರುವ ಹಾನಿಯು ಇದರಲ್ಲಿ ಸೇರಿದ್ದು, ಒಟ್ಟಾರೆ ಕೊರತೆಯನ್ನು ಕೇಂದ್ರ ಸರ್ಕಾರವು ಸಾಲದ ಮುಖಾಂತರ ರಾಜ್ಯಗಳಿಗೆ ಕೊರತೆಯನ್ನು ತುಂಬಿಕೊಡಲು ಒಪ್ಪಿರುತ್ತದೆ. ಈ ಸಾಲದ ಅಸಲು ಮತ್ತು ಬಡ್ಡಿಯ ಮೊತ್ತವನ್ನು ಮುಂದಿನ ವರ್ಷಗಳಲ್ಲಿ ಸಂಗ್ರಹವಾಗುವ ಸೆಸ್ ಮೊತ್ತದಿಂದ ಮರುಪಾವತಿ ಮಾಡಲಾಗುತ್ತದೆ.

ಇ)	ಕೇಂದ್ರ ಸರ್ಕಾರದ ಮಾರ್ಗೋಪಾಯಗಳಲ್ಲಿ ರಾಜ್ಯ ಸರ್ಕಾರ ಅನುಸರಿಸಿರುವ ಅಥವಾ ಆಯ್ದುಕೊಂಡಿರುವ ಮಾರ್ಗೋಪಾಯಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)	ಎರಡು ಆಯ್ಕೆಗಳಲ್ಲಿ ರಾಜ್ಯವು ಆಯ್ಕೆ-1ನ್ನು ಆಯ್ದುಕೊಂಡಿರುತ್ತದೆ. ತೆರಿಗೆ ನಷ್ಟಪರಿಹಾರ ಸಾಲವನ್ನು ರಾಜ್ಯಗಳು ಪಡೆಯುವುದರಿಂದ ಅಸಲು ಮತ್ತು ಬಡ್ಡಿಯ ಮರುಪಾವತಿಯ ಹೊರೆಯು ರಾಜ್ಯಗಳ ಮೇಲಿರದೆ ಸಂಗ್ರಹವಾಗುವ ಸೆಸ್ ಮೊತ್ತದಿಂದ ಪಾವತಿಸಲಾಗುವುದು.
ಈ)	ಈ ಮಾರ್ಗೋಪಾಯದ ರೀತ್ಯಾ ರಾಜ್ಯ ಸರ್ಕಾರ ವಾಣಿಜ್ಯ ಬ್ಯಾಂಕ್‌ಗಳಿಂದ / ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪಡೆದಿರುವ ಸಾಲವೆಷ್ಟು; ಈ ಸಾಲಗಳ ಮಂಜೂರಾತಿಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ನಿರ್ವಹಿಸಬೇಕಾಗಿರುವ ನಿಬಂಧನೆಗಳೇನು; (ವಿವರ ನೀಡುವುದು)	ಆಯ್ಕೆ-1 ರ ರೀತ್ಯಾ ರಾಜ್ಯ ಸರ್ಕಾರ ಯಾವುದೇ ವಾಣಿಜ್ಯ ಬ್ಯಾಂಕ್‌ಗಳಿಂದ / ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಸಾಲ ಪಡೆದಿರುವುದಿಲ್ಲ. ಬದಲಾಗಿ ಕೇಂದ್ರ ಸರ್ಕಾರವು ಒಟ್ಟು ರೂ.12047.00 ಕೋಟಿಗಳ ಸಾಲವನ್ನು ಪಡೆದು Special Window ಮುಖಾಂತರ ರಾಜ್ಯಕ್ಕೆ ನೀಡುತ್ತಿದೆ. ಈ ಸಾಲದ ಮೇಲಿನ ಹೊಣೆಗಾರಿಕೆಯನ್ನು ರಾಜ್ಯದ ಸಾಲವೆಂದು ಪರಿಗಣಿಸಲಾಗುವುದಿಲ್ಲ. ಈ ಸಾಲದ ಮೇಲಿನ ಅಸಲು ಮತ್ತು ಬಡ್ಡಿಯ ಮರುಪಾವತಿಯನ್ನು GST Cess ಸಂಗ್ರಹಣೆಯ ಮೂಲಕ ಕೇಂದ್ರ ಸರ್ಕಾರವೇ ಭರಿಸಲಿದೆ. ಈ ಸಾಲ ಹೊಣೆಗಾರಿಕೆಯು ರಾಜ್ಯಕ್ಕೆ ಇರುವುದಿಲ್ಲ.
ಉ)	ವಾಣಿಜ್ಯ ಬ್ಯಾಂಕ್/ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಪಡೆಯುವ ಸಾಲಗಳಲ್ಲಿ ಇಲಾಖಾವಾರು ಹಂಚಿಕೆಯ ವಿವರ ನೀಡುವುದು; ಈ ಹಂಚಿಕೆಯಲ್ಲಿ ಕೇವಲ ನೀರಾವರಿ ಇಲಾಖೆಗೆ ಅತಿ ಹೆಚ್ಚು ಹಂಚಿಕೆಯಾಗಲು ಕಾರಣವೇನು; ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಇತರೆ ಇಲಾಖೆಗಳಾದ ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಲೋಕೋಪಯೋಗಿ ಮತ್ತು ಸಣ್ಣ ನೀರಾವರಿ ಇಲಾಖೆಗಳನ್ನು ಕಡೆಗಣಿಸಲು ಕಾರಣವೇನು? (ಸಂಪೂರ್ಣ ಮಾಹಿತಿ ನೀಡುವುದು)	ಉದ್ಭವಿಸುವುದಿಲ್ಲ.

ಸಂಖ್ಯೆ: ಆಇ 06 ಸಿಎಸ್‌ಎಲ್ 2020 (e)

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ